**O.S.No.233/2016**
**DW-2**

**<u>ಸಾಕ್ಷಿಯನ್ನು ದಿನಾಂಕಃ 31.07.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಎನ್ ಎ ವಕೀಲರಿಂದ:</u>**

ನಾನು ಗ್ರಾಮ ಪಂಚಾಯಿತಿ ಸದಸ್ಯನಾಗಿದೆ ಎಂದರೆ ಸರಿ. ನನಗೆ ರಾಜಕೀಯ ವ್ಯಕ್ತಿಗಳು ಗೊತ್ತಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಮತ್ತು ಅವರ ಅಧಿಕಾರ ಪಡೆದವರು ನನ್ನ ಹಿಂಬಾಲಕರು ಎಂದರೆ ಸರಿಯಲ್ಲ. ವಾದಿಯನ್ನು ನಾನು 10 ವರ್ಷಗಳಿಂದ ನೋಡಿದ್ದೇನೆ. ವಾದಿಯ ತಂದೆ ಹೆಸರು ಜವರೇಗೌಡ. ಜವರೇಗೌಡರಿಗೆ ಮೂರು ಜನ ಸಹೋದರರು. ಅವರುಗಳೆಂದರೆ ಚಿಕ್ಕಲಕ್ಕೇಗೌಡ, ಜವರೇಗೌಡ ಮತ್ತು ಗೌಡಯ್ಯ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ. ಜವರೇಗೌಡರ ಮೂಲ ಪುರುಷ ಲಕ್ಕಣ್ಣಗೌಡ. ಲಕ್ಕಣ್ಣಗೌಡರ ಮಕ್ಕಳೆಂದರೆ ಚಿಕ್ಕಲಕ್ಕೇಗೌಡ, ಜವರೇಗೌಡ ಮತ್ತು ಗೌಡಯ್ಯ. ಲಕ್ಕಣ್ಣಗೌಡರ ಮಕ್ಕಳು ಜಮೀನನ್ನು 30-40 ವರ್ಷಗಳ ಹಿಂದೆ ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಚಿಕ್ಕಲಕ್ಕೇಗೌಡ, ಜವರೇಗೌಡ ಮತ್ತು ಗೌಡಯ್ಯ ಮೃತಪಟ್ಟು 50 ವರ್ಷಗಳಾಗಿರಬಹುದು. ಮೂಲ ಪುರಷ ಲಕ್ಕಣ್ಣಗೌಡರಿಗೆ ಸರ್ವೆ ನಂ.46 ರಲ್ಲಿ 15 ಎಕರೆ ಜಮೀನು ಇತ್ತು. ಸದರಿ ಜಮೀನು ಲಕ್ಕಣ್ಣಗೌಡ ಬದುಕಿದ್ದಾಗ ಪೌಡು ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಲಕ್ಕಣ್ಣಗೌಡರ ಮೂರು ಮಕ್ಕಳು ತಲಾ ಐದು ಎಕರೆ ಹಂಚಿಕೊಂಡಿರುತ್ತಾರೆ. ಚಿಕ್ಕಲಕ್ಕೇಗೌಡರ 5 ಎಕರೆಯ ಜಮೀನಿನ ಚೆಕ್ಕುಬಂದಿ ದಕ್ಷಿಣಕ್ಕೆ ತರಿಕೆರೆ ಎಲ್ಲೆ, ಉತ್ತರಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪೂರ್ವಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪಶ್ಚಿಮಕ್ಕೆ ಬೋಸಂದ್ರ ಗಡಿ. ಜವರೇಗೌಡರ 5 ಎಕರೆಯ ಜಮೀನಿನ ಚೆಕ್ಕುಬಂದಿ ದಕ್ಷಿಣಕ್ಕೆ ತರಿಕೆರೆ ಎಲ್ಲೆ, ಉತ್ತರಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪೂರ್ವಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪಶ್ಚಿಮಕ್ಕೆ ಬೋಸಂದ್ರ ಗಡಿ. ಗೌಡಪ್ಪ ಉರುಫ್ ಗೌಡಯ್ಯ ನವರ 5 ಎಕರೆಯ

ಜಮೀನಿನ ಚೆಕ್ಕುಬಂದಿ ದಕ್ಷಿಣಕ್ಕೆ ತರಿಕೆರೆ ಎಲ್ಲೆ, ಉತ್ತರಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪೂರ್ವಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪಶ್ಚಿಮಕ್ಕೆ ಬೋಸಂದ್ರ ಗಡಿ.

2. ಚಿಕ್ಕಲಕ್ಕೇಗೌಡರಿಗೆ 4 ಜನ ಮಕ್ಕಳು. ಅವರುಗಳೆಂದರೆ ಹುಚ್ಚಪ್ಪ, ಲಕ್ಕಪ್ಪ, ಮರಿಯಪ್ಪ ಮತ್ತು ತಮ್ಮಯ್ಯ. ಚಿಕ್ಕಲಕ್ಕೇಗೌಡರ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ. ಚಿಕ್ಕಲಕ್ಕೇಗೌಡರ ಭಾಗಕ್ಕೆ ಬಂದಿದ್ದ 5 ಎಕರೆ ಜಮೀನಿನಲ್ಲಿ ಅವರ ಮಕ್ಕಳು 4 ಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗಕ್ಕೆ ನಾನು ಸೇರಿರಲಿಲ್ಲ. ಸದರಿ ವಿಭಾಗವನ್ನು ನಾನು ನೋಡಿರಲಿಲ್ಲ. ಚಿಕ್ಕಲಕ್ಕೇಗೌಡರ ಮೂರು ಜನ ಮಕ್ಕಳು ತಮ್ಮ ಭಾಗವನ್ನು ಹುಚ್ಚಪ್ಪನವರ ಮಕ್ಕಳು ಚಿಕ್ಕಲಕ್ಕೇಗೌಡರ ಮಕ್ಕಳಿಗೆ ಮಾರಾಟ ಮಾಡಿರುತ್ತಾರೆ. ನಾನು ಮೇಲೆ ಹೇಳಿದ ಚೆಕ್ಕುಬಂದಿಯ ಆಸ್ತಿಯನ್ನು ಚಿಕ್ಕಲಕ್ಕೇಗೌಡರ ಮೂರು ಜನ ಮಕ್ಕಳು ಮಾರಾಟ ಮಾಡಿರುತ್ತಾರೆ.

3. ಜವರೇಗೌಡರಿಗೆ ನಾಲ್ಕು ಜನ ಮಕ್ಕಳು. ಅವರುಗಳೆಂದರೆ ಕಳಸಪ್ಪ, ಹುಚ್ಚಪ್ಪ, ಲಕ್ಕಣ್ಣ ಮತ್ತು ಚಿಕ್ಕಣ್ಣ. ಜವರೇಗೌಡರ 4 ಜನ ಮಕ್ಕಳು ತಲಾ ಒಂದು ಕಾಲು ಎಕರೆ ಜಮೀನನ್ನು ಹಂಚಿಕೊಂಡಿರುತ್ತಾರೆ. ಸದರಿ ವಿಭಾಗಕ್ಕೆ ನಾನು ಸೇರಿರಲಿಲ್ಲ. ಸದರಿ ವಿಭಾಗವನ್ನು ನಾನು ನೋಡಿರಲಿಲ್ಲ. ಸದರಿ ಒಂದು ಕಾಲು ಎಕರೆಯ ಚೆಕ್ಕುಬಂದಿಗೆ ದಕ್ಷಿಣಕ್ಕೆ ತರಿಕೆರೆ ಎಲ್ಲೆ, ಉತ್ತರಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪೂರ್ವಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪಶ್ಚಿಮಕ್ಕೆ ಬೋಸಂದ್ರ ಗಡಿ. ಚಿಕ್ಕಲಕ್ಕೇಗೌಡರ ಮಕ್ಕಳು ಮಾರಾಟ ಮಾಡಿಕೊಂಡ ಕಾರಣ ಮತ್ತು ನಾವು ಪಕ್ಕದಲ್ಲಿ ಇರುವ ಕಾರಣ, ಯಾರಿಗೆ ಎಷ್ಟು ಆಸ್ತಿ ಬಂದಿತ್ತು ಎಂದು ಹೇಳುತ್ತಿದ್ದೇನೆ.

ಚಿಕ್ಕಲಕ್ಕೇಗೌಡರಿಗೆ ವಿಭಾಗದಂತೆ ಖಾತೆಯಾಗಿತ್ತು. ಚಿಕ್ಕಲಕ್ಕೇಗೌಡರ ಮಕ್ಕಳು ಮಾರಾಟ ಮಾಡುವ ಮೊದಲು ಅವರ ಮಕ್ಕಳಿಗೆ ವಿಭಾಗದಂತೆ ಖಾತೆಯಾಗಿತ್ತು. ನಾನು ಆ ಕುರಿತು ಕಂದಾಯ ದಾಖಲೆಗಳನ್ನು ನೋಡಿದ್ದೆ.

4. ಜವರೇಗೌಡರ 4 ಜನ ಮಕ್ಕಳಿಗೆ ಖಾತೆಯಾಗಿತ್ತು. ಜವರೇಗೌಡರ 4 ಜನ ಮಕ್ಕಳಲ್ಲಿ ಮೂರು ಜನ ಮಕ್ಕಳಾದ ಕಳಸಪ್ಪ, ಹುಚ್ಚಪ್ಪ ಮತ್ತು ಚಿಕ್ಕಣ್ಣ ಆಸ್ತಿ ಮಾರಾಟ ಮಾಡಿರುತ್ತಾರೆ. ಜವರೇಗೌಡರಿಗೆ 5 ಜನ ಮಕ್ಕಳು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತೋರಿಸಿದ್ದು, ಆದರೆ ಅವರಿಗೆ ನಾಲ್ಕೇ ಜನ ಮಕ್ಕಳು ಇರುತ್ತಾರೆ. ನಾನು ಜವರೇಗೌಡರಿಗೆ 5 ಜನ ಮಕ್ಕಳು ಎಂದು ಬರೆಸಿರುವುದಿಲ್ಲ. ಕಳಸಪ್ಪ, ಹುಚ್ಚಪ್ಪ ಮತ್ತು ಚಿಕ್ಕಣ್ಣ ರವರುಗಳು ಹುಚ್ಚಪ್ಪನವರ ಮಕ್ಕಳು ಮತ್ತು ಚಿಕ್ಕಲಕ್ಕೇಗೌಡರ ಮಕ್ಕಳಿಗೆ ಮಾರಾಟ ಮಾಡಿರುತ್ತಾರೆ. ಮಾರಾಟ ಮಾಡಿದವರಿಗೆ ಎಲ್ಲರಿಗೂ ಖಾತೆಯಾಗಿತ್ತು. ಈಗ ಖರೀದಿ ಮಾಡಿದವರ ಹೆಸರಿನಲ್ಲಿ ಖಾತೆ ಇರುತ್ತದೆ. ಜವರೇಗೌಡರ ಮಕ್ಕಳ ಮಾರಾಟ ಮಾಡಿದ ಆಸ್ತಿಯ ಚೆಕ್ಕುಬಂದಿ ದಕ್ಷಿಣಕ್ಕೆ ತರಿಕೆರೆ ಎಲ್ಲೆ, ಉತ್ತರಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪೂರ್ವಕ್ಕೆ ನಮ್ಮದೇ ಸರ್ವೆ ನಂ.44ರ ಸ್ವಂತ ಜಮೀನು, ಪಶ್ಚಿಮಕ್ಕೆ ಬೋಸಂದ್ರ ಗಡಿ. ಜವರೇಗೌಡರ ಮಕ್ಕಳ ಪೈಕಿ 27 ಗುಂಟೆಯನ್ನು ವಾದಿಯು ಉಳಿಸಿಕೊಂಡಿರುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಜವರೇಗೌಡರ 5 ಜನ ಮಕ್ಕಳ ಹೆಸರಿನಲ್ಲಿ ವಾದಿಯ ಹೆಸರನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತೋರಿಸಿಲ್ಲ. ವಾದಿಗೆ ಸರ್ವೆ ನಂ.46/15ರಲ್ಲಿ 27 ಗುಂಟೆ ಉಳಿದಿದೆ. ಸದರಿ ಜಮೀನನ್ನು ನಾನು ನೋಡಿರುತ್ತೇನೆ. ಸದರಿ ಜಮೀನಿನ ಚೆಕ್ಕುಬಂದಿ ದಕ್ಷಿಣಕ್ಕೆ ತರಿಕೆರೆ ಎಲ್ಲೆ, ಉತ್ತರಕ್ಕೆ ಲಕ್ಕಣಗೌಡರ ಮನೆ ನಿವೇಶನದ

ಒಟ್ಟು 5 ಗುಂಟೆ, ಪೂರ್ವಕ್ಕೆ ನಮ್ಮ ಸ್ವಂತ ಜಮೀನು, ಪಶ್ಚಿಮಕ್ಕೆ ಹುಚ್ಚಪ್ಪನವರ ಮಕ್ಕಳ ಜಮೀನು. ಉತ್ತರಕ್ಕಿರುವ ಲಕ್ಕಣಗೌಡರ ಮನೆ ಮತ್ತು ನಿವೇಶನ ಸರ್ವೆ ನಂ.46/15ರಲ್ಲಿ ಇರುತ್ತದೆ. ಸದರಿ ಜಾಗದಲ್ಲಿ 50 ವರ್ಷಗಳಿಂದ ಒಂದೇ ಬಾಗಿಲಿನ ಒಂದೇ ಮನೆ ಇರುತ್ತದೆ. ಸದರಿ ಮನೆ 5 ಗುಂಟೆ ಜಾಗದಲ್ಲಿ ಇತ್ತು. ಸದರಿ ಮನೆಯಲ್ಲಿ ಲಕ್ಕಣ್ಣಗೌಡರ ಮೂರು ಜನ ಮಕ್ಕಳು, ಅವರ ಮೂರು ಜನ ಮಕ್ಕಳ ಮಕ್ಕಳುಗಳು ಇದ್ದರು. ಸದರಿ 5 ಗುಂಟೆ ಮನೆಯನ್ನು ಲಕ್ಕಣ್ಣಗೌಡ ಮೂರು ಜನ ಮಕ್ಕಳು ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿದ್ದರು. ಸದರಿ ವಿಭಾಗಕ್ಕೆ ನನ್ನ ತಂದೆ ಸೇರಿದ್ದು, ನಾನು ಸೇರಿರಲಿಲ್ಲ. ಲಕ್ಕಣ್ಣಗೌಡ ಮೂರು ಜನ ಮಕ್ಕಳು ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಲಕ್ಕಣ್ಣಗೌಡ ಮೂರು ಜನ ಮಕ್ಕಳಲ್ಲಿ ಉತ್ತರಕ್ಕೆ ಗೌಡಯ್ಯ, ದಕ್ಷಿಣಕ್ಕೆ ಜವರೇಗೌಡನ ಮಕ್ಕಳು, ಪಶ್ಚಿಮಕ್ಕೆ ಚಿಕ್ಕಲಕ್ಕೇಗೌಡರ ಮಕ್ಕಳು ವಾಸವಿದ್ದರು. ಮಧ್ಯದಲ್ಲಿ ಉಳಿದಿದ್ದ ಖಾಲಿ ಜಾಗದಲ್ಲಿ ಮೂರು ಜನರು ಸಹ ಜಾನುವಾರು ಕಟ್ಟಿಕೊಂಡಿದ್ದರು. ಈಗ ನಾನು ಮೇಲೆ ಹೇಳಿದಂತೆ ಈಗಲೂ ಸಹ ಅವರು ಸ್ವಾಧೀನದಲ್ಲಿದ್ದಾರೆ.

5. ಚಿಕ್ಕಲಕ್ಕೇಗೌಡರ ಮಕ್ಕಳು 40x80 ಅಡಿ ಜಾಗದಲ್ಲಿ ವಾಸವಿದ್ದರು. ಸದರಿ ಜಾಗದ ಚೆಕ್ಕಬುಂದಿ ಪೂರ್ವಕ್ಕೆ ನಮ್ಮ ಸ್ವಂತ ಜಾಗ, ಪಶ್ಚಿಮಕ್ಕೆ ತಿಬ್ಬಮ್ಮನ ಜಮೀನು, ಉತ್ತರಕ್ಕೆ ಪ್ರಭಾಕರ ಮನೆಯ ರಸ್ತೆ, ದಕ್ಷಿಣಕ್ಕೆ ವಾದಿ ಉಳಿಸಿಕೊಂಡ 27 ಗುಂಟೆ ಜಮೀನು. ಜವರೇಗೌಡರ ಭಾಗಕ್ಕೆ 40x80 ಅಡಿ ಜಾಗ ಬಂದಿತ್ತು. ಸದರಿ ಜಾಗದ ಚೆಕ್ಕಬುಂದಿ ಪೂರ್ವಕ್ಕೆ ನಮ್ಮ ಸ್ವಂತ ಜಾಗ, ಪಶ್ಚಿಮಕ್ಕೆ ತಿಬ್ಬಮ್ಮನ ಜಮೀನು, ಉತ್ತರಕ್ಕೆ ಗೌಡಯ್ಯನ ಜಾಗ, ದಕ್ಷಿಣಕ್ಕೆ ವಾದಿಯ ಜಾಗ. ಸದರಿ ಆಸ್ತಿಯನ್ನು ಜವರೇಗೌಡರ ಮಕ್ಕಳು ಹಂಚಿಕೊಂಡ ಬಗ್ಗೆ ನನ್ನ ತಂದೆಗೆ ಗೊತ್ತಿತ್ತು. ಸದರಿ ಮನೆಯನ್ನು

ಜವರೇಗೌಡರ ಇಬ್ಬರು ಮಕ್ಕಳು ಒಟ್ಟಿಗೆಯೇ ವಾಸವಿದ್ದರು. ಚಿಕ್ಕಲಕ್ಕೇಗೌಡರು ಮತ್ತು ಜವರೇಗೌಡರ ಹೆಸರಿಗಾಗಲೀ ಮತ್ತು ಅವರ ಮಕ್ಕಳ ಹೆಸರಿಗಾಗಲೀ ಖಾತೆಯಾಗಿರಲಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.